ಇಷ್ಟು ಮಾತಾಗುವ ಹೊತ್ತಿಗೆ, ಮರಳಿ ಹಾಸಿಗೆಯಲ್ಲಿ ಇರುಳು ಹೊಕ್ಕಿದ್ದ ರೇಣುವನ್ನೂ ಪುನಃ ಕುತೂಹಲ ಕಾಡಿತಾಗಿ, ಅವಳ ನಿದ್ದೆಯೊಮ್ಮೆಗೇ ಹಾರಿಹೋಗಿ ಅವಳನ್ನೂ ಫೋನಿರುವಲ್ಲಿಗೆ ತಂದೊಗಾಯಿಸಿತ್ತು.

★★★

ರುದ್ರನೀಲ ಮತ್ತು ರೇಣುಯುಕ್ತಿ 'ಥಾಪಸೆ'ಯರು ಗರಾಜಿನಿಂದ ಕಾರೆಳೆದುಕೊಂಡು, ಆರೂವರೆಯ ಸುಮಾರಿಗೆಲ್ಲ ಹೆದ್ದಾರಿಯಲ್ಲಿದ್ದರು. 'ನೈಸ್ರೋಡಿನಲ್ಲಿ ಹೋದರೆ ಅರ್ಧ ಗಂಟೆಯಲ್ಲಿ ಜಿಂದಾಲಿನ ಹತ್ತಿರ ತುಮಕೂರು ರೋಡು ಸೇರಿರುತೀವಿ... ಅಲ್ಲಿಂದ ಹದಿನೈದಿಪ್ಪತ್ತು ಮಿನಿಟಿನಲ್ಲಿ ನೆಲಮಂಗಲ... ಒಟ್ಟಾರೆ ಒಂದು ತಾಸಿನಲ್ಲಿ ಹ್ಯೂಸ್‌ಫಾರ್ಮ್ ಸೇರಬಹುದು...' ರುದ್ರನೀಲ ಥಾಪಸೆ, ಸ್ಟಿಯರಿಂಗಿನಲ್ಲಿದ್ದ ರೇಣುವನ್ನು 'ಮರಾಠಿ'ಯಲ್ಲಿಯೇ ನಿರ್ದೇಶಿಸುತ್ತ ಆಡಿದ.

'ಹೇಳು... ಹೇಳು... ಬಡಾನೀಲ್, ಏನಾಗಿತ್ತಂತೆ, ಆತನಿಗೆ?' ರೇಣು ಈ ಮೊದಲು ಕೇಳಿಸಿಕೊಂಡಿದ್ದನ್ನೇ ಮತ್ತೆ ಕೇಳಲಿಚ್ಛಿಸಿ ಕೇಳಿದಳು.

'ಇನ್ನೇನಾಗಿರುತ್ತೆ? ತೀರಾ ಪ್ರ್ಯಾಕ್ಟಿಕಲ್ಲಾಗಿ ನೋಡಿದರೆ ಸೂಇಸೈಡು ಅಷ್ಟೆ... ಆದರೆ ನನಗೆ ಹಾಗೆ ಪ್ರ್ಯಾಕ್ಟಿಕಲ್ಲಾಗಿ ನೋಡೋಕೇ ಬರಲ್ಲವೆ?!'

'ಎಷ್ಟು ವಯಸ್ಸಿರಬಹುದು?'

'ಹೆಚ್ಚುಕಮ್ಮಿ ನನ್ನದೇ ವಯಸ್ಸು... ಹತ್ತು ವರ್ಷದ ಹಿಂದೆ ಅಂದರೆ ಲೆಕ್ಕ ಹಾಕಿಕೋ... ಆಗ ನನಗೈವತ್ತೈದು. ನನಗಿಂತ ಎರಡು ವಯಸ್ಸಿಗೆ ದೊಡ್ಡವನೂಂತ ಹೇಳಿದ ನೆನಪು...' ಹೀಗೆ ಹೇಳುವಾಗ, ರುದ್ರನೀಲ ಥಾಪಸೆಯನ್ನು ಈಚಿನ ದಿವಸಗಳಲ್ಲಿ ಕಾಡುತ್ತಿರುವ ಕಸಿವಿಸಿ ಮತ್ತು ಹೇಳಲಿಕ್ಕಾಗದ ತಳಮಳ ಮರಳಿ ಉಮ್ಮಳಿಸಿತು. ಅರಿವಿರದೆ ಕಣ್ಣು ಪಸೆಗೂಡಿದವು. ಬದುಕೆಂಬ ಬದುಕೇ ವಿಚಿತ್ರವೆನ್ನಿಸಿತು. ಅಷ್ಟೇ, ಆರ್ಥರ್ ಡೇವಿಡ್ ಹ್ಯೂಸ್ ಎಂಬಾತನ ಸಾವೂ!

★★★

ಹತ್ತು ವರ್ಷಗಳ ಹಿಂದೆ, ಅಂತಂದರೆ ಎರಡು ಸಾವಿರದೈದನೇ ಇಸವಿಯ ಕೊನೆಯಲ್ಲೇನೋ, ಇದ್ದಕ್ಕಿದ್ದಂತೆ ಆರ್ಥರ್ ಡೇವಿಡ್ ಹ್ಯೂಸ್ ಅಂತೆಂಬ, ಕಟ್ಟಾ ಬ್ರಿಟನ್ನಿನ ಫಿರಂಗೀ ಆಳು ಕೆಂಪುಮೋರೆ ಮತ್ತು ನೀಲಿಗಣ್ಣುಗಳ ಇಂಗ್ಲಿಷ್‌ಭಾಷಿನೊಡನೆ, ರುದ್ರನೀಲ ಥಾಪಸೆಯಷ್ಟೇ ಹಣೆಯಲ್ಲಿ ಸುಕ್ಕಿಟ್ಟುಕೊಂಡು, ರೇಣುವನ್ನು 'ಥಾಪಸೆ ಅಸೋಸಿಏಟ್ಸ್' ಅಂತೆಂಬ ಆರ್ಕಿಟೆಕ್ಟುಗಳ ಕಚೇರಿಯಲ್ಲಿ ಬಂದೆದುರುಗೊಂಡಿದ್ದ. ಮೇಜಿನಲ್ಲೊಂದು ಹಾಳೆಯ ಮೇಲೆ, ಯಾವುದೋ ಡಿಸೈನು ಡೂಡಲಿಸಿಕೊಂಡಿದ್ದ ರುದ್ರನೀಲ ಥಾಪಸೆ, ರೇಣುವಿನತ್ತ ಗೋಣು ಹೊರಳಿಸಿದ್ದು ಒಳಬಂದವನ ಕಟುವಾದ ಇಂಗ್ಲಿಷ್ ಸೊಗಡು ಕೇಳಿದ ಮೇಲೆಯೇನೆ! 'ಹೂ ರೆಫರ್ಡ್ ಯೂ ಟು ಅಸ್, ಮಿಸ್ಟರ್ ಹ್ಯೂಸ್?' ಎಂದು ಹೆಂಡತಿ ಕೇಳುವ ಸುಮಾರಿಗೆಲ್ಲ, ರುದ್ರನೀಲ ಥಾಪಸೆ, ಅವಳ ಮೇಜು ತಲುಪಿದ್ದ. ಆರಡಿಯೆತ್ತರದ ವಿಶಾಲ ಎದೆಕಟ್ಟಿನ ಹ್ಯೂಸ್, 'ವೆಲ್ಲ್... ಡಸ್ ದಟ್ ರಿಯಲೀ ಮ್ಯಾಟರ್? ನಾನು ನಿಮ್ಮೊಡನೊಂದು ಪ್ರಾಜೆಕ್ಟು ಕುರಿತಾಗಿ ಡಿಸ್ಕಸ್ ಮಾಡಬೇಕು... ನಾನು ಕಟ್ಟಿಸಲಿಕ್ಕಿರುವ ಮನೆ ಅದು. ಮಾಡಬಹುದಾ?' ಅಂತಂದು, ಅಲ್ಲೇ ಎದುರಿಗಿದ್ದ ಛೇರೆಳೆದುಕೊಂಡು ಒಮ್ಮಿಂದೊಮ್ಮೆ ಕುಕ್ಕರಿಸಿದ. 'ಅಯಾಮ್ ಸ್ಸಾರೀ... ನಾನು ನಿಮಗೆ ಕೂರಹೇಳಬೇಕಿತ್ತು...' ಎಂದು ಸೌಜನ್ಯದ ಮೇರೆಗೆ ರೇಣುವೇ ಹೇಳಿದಳು.